ಇ) ಒಡೆದುಹೋಗಿರುವ ಈ ನೀರಾವರಿ ಕೆರೆಗಳನ್ನು ದುರಸ್ಥಿ ಮಾಡಿ ನೀರಿನ ಸಂಗ್ರಹಕ್ಕೆ ಅನುಕೂಲವಾಗುವಂತಹ ಕ್ರಮವನ್ನೇನಾದರೂ ಸರ್ಕಾರ ತೆಗೆದುಕೊಂಡಿದೆಯೇ?

ಈ) ಈ ಕೆರೆಗಳ ದುರಸ್ಥಿಗಾಗಿ ಸರ್ಕಾರದವರು ಬಿಡುಗಡೆ ಮಾಡಿರುವ ಹಣವೆಷ್ಟು?

ಉ) ಈ ಕೆರೆಗಳ ದುರಸ್ಥಿಯ ಕಾಮಗಾರಿಯನ್ನು ಎಂದು ಪ್ರಾರಂಭ ಮಾಡಲಾಗುವುದು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯವರು):

ಅ) ಬಂದಿದೆ.

ಆ) 12 ಕೆರೆಗಳು

ಇ) ಈ ಸಾಲಿನಲ್ಲಿ ದುರಸ್ಥಿ ಕೆಲಸವನ್ನು ಕೈಗೊಳ್ಳಲಾಗುವುದು

ಈ) 5.00 ಲಕ್ಷ ರೂ.ಗಳು

ಉ) ಶೀಘ್ರವಾಗಿ ಪ್ರಾರಂಭಿಸಲಾಗುವುದು.

ವರಾಹಿ ಯೋಜನೆಗೆ ಕಂದಾಯ ಇಲಾಖೆಯಿಂದ ಕೊಟ್ಟಿರುವ ಭೂಮಿ

2431 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವರಾಹಿ ವಿತ ನೀರಾವರಿಯಲ್ಲಿ ಕಂದಾಯ ಖಾತೆಯವರು ನೀರಾವರಿ ಇಲಾಖೆಗೆ ಬಿಟ್ಟುಕೊಡುವ ಭೂಮಿ ಎಷ್ಟು?

ಆ) ಇದರಲ್ಲಿ ಕುಷ್ಕಿ ಭೂಮಿ ಎಷ್ಟು ಮತ್ತು ಪಟ್ಟಾ ಭೂಮಿ ಎಷ್ಟು?

ಇ) ಕುಷ್ಕಿ ಭೂಮಿಯಲ್ಲಿ ಸ್ವಾಧೀನ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆಯೆ?

ಈ) ವರಾಹಿ ವಿತ ನೀರಾವರಿ ಯೋಜನೆಯ ಕಾಲುವೆಗೋಸ್ಕರ ನೀರಾವರಿ ಇಲಾಖೆ ಕೇಳಿದ ಅರಣ್ಯ ಭೂಮಿ, ಕಂದಾಯ ಇಲಾಖೆ ಭೂಮಿ ಪಟ್ಟಾ ಮತ್ತು ಕುಷ್ಕಿ ಭೂಮಿಗಳ ಕಾಲುವೆ ಅಗಲದಲ್ಲಿ ವ್ಯತ್ಯಾಸ ಇದೆಯೇ;

ಉ) ಇದ್ದಲ್ಲಿ ಸಮರ್ಪಕ ಕಾರಣವೇನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ವರಾಹಿ ವಿತ ನೀರಾವರಿ ಯೋಜನೆಗಾಗಿ ಒಟ್ಟು 89.80 ಹೆಕ್ಟೇರ್ ಭೂಮಿಯ ಅವಶ್ಯಕತೆ ಇದ್ದು ಅದರಲ್ಲಿ ಕಂದಾಯ ಖಾತೆಯವರು 45.08 ಹೆಕ್ಟೇರ್ ಬಿಟ್ಟುಕೊಡುವ ಭೂಮಿ ಆಗಿರುತ್ತದೆ.

ಆ) ಇದರಲ್ಲಿ ಕುಷ್ಕಿ ಭೂಮಿಯ 45.08 ಹೆಕ್ಟೇರ್‌ಗಳಲ್ಲಿ ಇಲ್ಲಿಯವರೆಗೆ 34.08 ಹೆಕ್ಟೇರ್ ಭೂಮಿಯನ್ನು ನೀರಾವರಿ ಇಲಾಖೆಗೆ ಕೊಡಲಾಗಿದೆ. ಉಳಿಕೆ 11.00 ಹೆಕ್ಟೇರ್ ಕುಷ್ಕಿ ಭೂಮಿ ಕೊಡಬೇಕಾಗಿದೆ. ಪಟ್ಟಾಭೂಮಿ ಒಟ್ಟು 44.72 ಹೆಕ್ಟೇರ್‌ಗಳು ಇರುತ್ತದೆ.

ಇ) ಹೌದು

ಈ) ಕಾಲುವೆ ವಿನ್ಯಾಸಕ್ಕೆ ಅನುಗುಣವಾಗಿ ಕಾಲುವೆ ಅಗಲದಲ್ಲಿ ವ್ಯತ್ಯಾಸ ಮಾಡಿದೆಯೇ ವಿನಹ ಭೂಮಿಗೆ ತಕ್ಕಂತೆ ವ್ಯತ್ಯಾಸ ಮಾಡಿರುವುದಿಲ್ಲ.

ಉ) ಕಾಲುವೆಯ ಸೆಕ್ಷನ್‌ಗಳನ್ನು ವಿನ್ಯಾಸ ಮಾಡುವಾಗ ಕಾಲುವೆಯಲ್ಲಿ ಹರಿಯುವ ನೀರಿನ ಪ್ರಮಾಣ ಕಾಲುವೆಯ ಪಾರ್ಶ್ವ ಇಳಿಜಾರು ಮತ್ತು ಕಾಲುವೆಯ ನಾಲಾ ಪಥದ ಉದ್ದಕ್ಕೆ ಕಾಲುವೆಯ ಅಗೆತದ ಎತ್ತರ ವ್ಯತ್ಯಾಸವಿರುವಾಗ ಕಾಲುವೆಯ ಅಗಲವೂ ಕೂಡ ಹೆಚ್ಚು ಕಡಿಮೆಯಾಗಿರುತ್ತದೆ.